ಅಸಲು ದಾವೆ ಸಂಖ್ಯೆ **- 147/2017 (PW-1)**

ದಿನಾಂಕ 08-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ಶ್ರೀ.ವಾಯ್.ಜಿ.ಜಿ. ವಕೀಲರಿಂದ**

ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಾಂಗ ಮಾಡಿರುತ್ತೇನೆ. ಪ್ರಸ್ತುತ ದಾವೆಯನ್ನು ನನ್ನ ಹೆಂಡತಿ ಮತ್ತು ಅವರ ಸಹೋದರಿಯರು ಸೇರಿ ಕಂಬಳಿಮಠರವರ ಮೇಲೆ ದಾಖಲಿಸಿರುತ್ತಾರೆ. ನಮಗೆ ಸೇರಿದ ಹಿತ್ತಲು ನಮಗೆ ಉಳಿಯಬೇಕೆಂದು ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ. ನನ್ನ ಹೆಂಡತಿ ಹಾಗೂ ಅವರ ಸಹೋದರಿಯರು ಯಾವುದೇ ದಾವೆ ದಾಖಲಿಸಿರುವುದಿಲ್ಲವೆಂದು ಸಾಕ್ಷಿದಾರರು ಮುಂದುವರೆದು ನುಡಿಯುತ್ತಾರೆ. ಆಸ್ತಿ ಸಂಖ್ಯೆ 188ಎ ರ ಸ್ವತ್ತು ನಮ್ಮದು ಎಂದು ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ಪ್ರಸ್ತುತ ದಾವೆ ಸಲ್ಲಿಸಲು ನನ್ನ ಹೆಂಡತಿಯೇ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತಾಳೆ. ದಾವಾ ಸಲ್ಲಿಸುವ ಸಮಯದಲ್ಲಿ ನನ್ನ ಹೆಂಡತಿ ನನ್ನ ಪರವಾಗಿ ಸಾಮಾನ್ಯ ಅಧಿಕಾರ ಪತ್ರ ನೀಡಿರಲಿಲ್ಲವೆಂದರೆ ಸರಿ. ದಾವಾ ಪತ್ರದಲ್ಲಿ ಯಾವ ವಿಷಯಗಳನ್ನು ನಮೂದಿಸಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ಪ್ರಸ್ತುತ ದಾವೆ ಸಲ್ಲಿಸುವಾಗ ನನ್ನ ಹೆಂಡತಿ ಹಾಗೂ ಅವರ ಸಹೋದರಿಯರು ಖುದ್ದಾಗಿ ಬಂದು ವಕಾಲತ್ ಹಾಗೂ ದಾವಾ ಪತ್ರದ ಮೇಲೆ ಸಹಿ ಮಾಡಿ, ದಾವೆ ದಾಖಲಿಸಿರುತ್ತಾರೆಂದರೆ ಸರಿ. ಅದೇ ರೀತಿ ಪ್ರಸ್ತುತ ದಾವೆಯಲ್ಲಿ ಸಾಕ್ಷಿ ನುಡಿಯಲು ಅವರಿಗೆ ಯಾವುದೇ ತೊಂದರೆ ಇರವುದಿಲ್ಲವೆಂದರೆ ಸಾಕ್ಷಿದಾರರು, ನನ್ನ ಹೆಂಡತಿಗೆ ವಯಸ್ಸಾಗಿದ್ದು, ಇನ್ನುಳಿದ ಇಬ್ಬರು ವಾದಿಗಳು ಅಶಕ್ತರಾಗಿರುವುದರಿಂದ ದಾವೆಯಲ್ಲಿ ಸಾಕ್ಷ್ಯವನ್ನು ನುಡಿಯಲು ಅಧಿಕಾರ ಪತ್ರ ನೀಡಿರುತ್ತಾರೆ. ವಾದಿಗಳಿಗೆ ವಯಸ್ಸಾಗಿದ್ದು ಅಶಕ್ತರಾಗಿರುವ ಕಾರಣ, ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನುಡಿಯಲು ಸಾಧ್ಯವಾಗುವುದಿಲ್ಲವೆಂಬ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲವೆಂದರೆ ಸರಿ.

ದಿನಾಂಕ 02.02.2018 ರಂದು ನನ್ನ ಪರವಾಗಿ ವಾದಿಗಳು ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ. ನಿ.ಪಿ.1 ಅಧಿಕಾರ ಪತ್ರದಲ್ಲಿ ವಾದಿಗಳು ವಯಸ್ಸಾಗಿದ್ದು ಅಶಕ್ತರಾಗಿರುವ ಕಾರಣ ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನುಡಿಯಲು ಆಗುವುದಿಲ್ಲವೆಂಬ ಅಂಶವನ್ನು ನಮೂದಿಸಿರುವುದಿಲ್ಲವೆಂದರೆ ಸರಿ. ನಿ.ಪಿ.1 ಅಧಿಕಾರ ಪತ್ರದಲ್ಲಿ ನನ್ನ ಹೆಂಡತಿಯಾದ ಒಂದನೇ ವಾದಿ ಹಾಗೂ ಎರಡನೇ ವಾದಿ ಮಾತ್ರ ಸಹಿ ಮಾಡಿರುತ್ತಾರೆ. 1 ಮತ್ತು 2ನೇ ವಾದಿಗಳ ಸಹಿ ನಿ.ಪಿ.1 ರ ಪುಟ 1 ಮತ್ತು 2 ರಲ್ಲಿ ಇರುವುದಿಲ್ಲವೆಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ನಮ್ಮ ವಕೀಲರು

ಹೇಳಿದ ಹಾಗೆ ಸಹಿ ಮಾಡಿರುತ್ತಾರೆ. ಪುಟ 1 ಮತ್ತು 2 ರಲ್ಲಿ ನನ್ನ ಸಹಿ ಇರುವುದಿಲ್ಲವೆಂದರೆ ಸರಿ. ನಿ.ಪಿ.1 ರಲ್ಲಿ ಪುಟ 1 ಮತ್ತು 2 ನ್ನು ಖೊಟ್ಟಿ ತಯಾರಿಸಿ, 3ನೇ ಪುಟದ ಜೊತೆಗೆ ಜೋಡಿಸಿ ನ್ಯಾಯಾಲಯದಲ್ಲಿ-



-ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಈಗ ವಾದಿಗಳು ನ್ಯಾಯಾಲಯದ ಮುಂದೆ ದಿನಾಂಕ 07.02.2012 ರಂದು ಸಲ್ಲಿಸಿರುವ ವಕಾಲತ್ ನ್ನು ತೋರಿಸಿ ಅದರ ಮೇಲೆ ಯಾರ ಸಹಿ ಇರುತ್ತದೆ, ಹೇಳಬಲ್ಲಿರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು, ವಕಾಲತ್ ನ್ನು ನೋಡಿ ಸದರಿ ವಕಾಲತ್ ಮೇಲೆ ನನ್ನ ಹೆಂಡತಿ ಸುವರ್ಣಾ ಹಾಗೂ ಮೂರನೇ ವಾದಿ ರಾಜೇಶ್ವರಿಯವರ ಸಹಿ ಇರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ. ದಿನಾಂಕ 07.02.2012 ರಂದು ಪ್ರಸ್ತುತ ನ್ಯಾಯಾಲಯದ ಮುಂದೆ ಪ್ರತಿವಾದಿಗಳ ಮೇಲೆ ಯಾವುದೇ ರೀತಿಯ ದಾವೆ ಇರಲಿಲ್ಲವೆಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ದಿನಾಂಕ 07.02.2012 ರಂದು ಮೂರನೇ ವಾದಿ ನನ್ನ ಪರವಾಗಿ ಯಾವುದೇ ರೀತಿಯ ಅಧಿಕಾರ ಪತ್ರ ಬರೆದುಕೊಟ್ಟಿರಲಿಲ್ಲವೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರಿಗೆ ಈಗ ವಾದ ಪತ್ರವನ್ನು ತೋರಿಸಲಾಗಿ ಸದರಿ ವಾದ ಪತ್ರದ ಮೇಲೆ ಮೂರು ವಾದಿಗಳು ಸಹಿ ಮಾಡಿರುತ್ತಾರೆಂದು ನೋಡಿ ಉತ್ತರಿಸಿರುತ್ತಾರೆ. ಸಾಕ್ಷಿದಾರರಿಗೆ ಈಗ ವಾದ ಪತ್ರದ ಜೊತೆ ಸಲ್ಲಿಸಿರುವ ವಕಾಲತನ್ನು ತೋರಿಸಲಾಗಿ, ಸದರಿ ವಕಾಲತ್ ಗೆ ಮೂರು ವಾದಿಗಳು ಸಹಿ ಮಾಡಿರುತ್ತಾರೆಂದು ನೋಡಿ ಉತ್ತರಿಸುತ್ತಾರೆ. ಸಾಕ್ಷಿದಾರರು ದಾವೆಯ ಜೊತೆ ಸಲ್ಲಿಸಲಾದ ವಕಾಲತನ್ನು ದಿನಾಂಕ 07.02.2012 ರಂದು ಸಲ್ಲಿಸಿರುವ ವಕಾಲತ್ ನ್ನು ತೋರಿಸಲಾಗಿ ಎರಡೂ ವಕಾಲತ್ ಗಳ ಮೇಲೆ ಮೂರನೇ ವಾದಿಯ ಸಹಿ ಬೇರೆ ಬೇರೆ ಆಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿದಾರರು ದಿನಾಂಕ 07.02.2012 ರಂದು ಯಾವುದೇ ವಕಾಲತ್ ಸಲ್ಲಿಸಿರುವುದಿಲ್ಲ, ಸದರಿ ವಕಾಲತ್ ಬೋಗಸ್ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ದಿನಾಂಕ 07.02.2012 ರಂದು ನಾವು ಬಿ.ಎ.ಜಿ ವಕೀಲರನ್ನು ನಮ್ಮ ಪರವಾಗಿ ವಕೀಲರಾಗಿ ನೇಮಿಸಿಕೊಂಡು ಯಾವುದೇ ವಕಾಲತ್ ಸಲ್ಲಿಸಿರುವುದಿಲ್ಲ. ನನ್ನ ಹೆಂಡತಿ ಹಾಗೂ ಅವರ ಸಹೋದರಿಯರು ಮೊದಲು ಎ.ಎ.ಎನ್ ವಕೀಲರನ್ನು ತಮ್ಮ ವಕೀಲರಾಗಿ ನೇಮಿಸಿಕೊಂಡಿದ್ದರು ಎಂದರೆ ಸರಿ. ಸದರಿ ವಕೀಲರು ಜಿಲ್ಲಾ ನ್ಯಾಯಾಧೀಶರಾಗಿ ನೇಮಕವಾದ ನಂತರ ಫೈಲನ್ನು ವಾಪಸ್ಸು ನೀಡಿದ್ದು, ನಂತರ ನಾನು ಬಿ.ಎ.ಜಿ ವಕೀಲರನ್ನು ನೇಮಿಸಿಕೊಂಡಿರುತ್ತೇನೆಂದರೆ ಸರಿ. ಬಿ.ಎ.ಜಿ ವಕೀಲರನ್ನು ನೇಮಿಸಿಕೊಂಡ ನಂತರ ನನ್ನ ಹೆಂಡತಿ ಹಾಗೂ ಸಹೋದರಿಯರು ಸಹಿ ಮಾಡಿ ನೀಡಿರುತ್ತಾರೆ. ದಿನಾಂಕ 07.02.2012 ಕ್ಕೆ ನಾವು ಯಾವುದೇ ರೀತಿಯ ವಕಾಲತ್ ಗೆ ಸಹಿ ಮಾಡಿ ಕೊಟ್ಟೇ ಇರುವುದಿಲ್ಲ. 2017

ರ ಜೂನ್ ನ ಮೊದಲನೇ ವಾರದಲ್ಲಿ ನಾವು ಬಿ.ಎ.ಜಿ ವಕೀಲರನ್ನು ನಮ್ಮ ಪರ ವಕೀಲರಾಗಿ ನೇಮಿಸಿಕೊಂಡಿರುತ್ತೇವೆ. ಆ ರೀತಿ ವಕೀಲರನ್ನು ನೇಮಿಸಿಕೊಂಡ ಬಗ್ಗೆ ವಕಾಲತ್ ದಾವೆಯ ದಾಖಲಾತಿಗಳಲ್ಲಿ ಇರುತ್ತದೆಯೇ? ನೋಡಿ ಹೇಳಲಾಗುತ್ತದಾ ? ಎಂದು ಕೇಳಿದ

--12--

ಅಸಲು ದಾವೆ ಸಂಖ್ಯೆ - **147/2017 (PW-1)**

-ಪ್ರಶ್ನೆಗೆ ಸಾಕ್ಷಿದಾರರು, ನನಗೆ ಇಂಗ್ಲಿಷ್ ಓದಲು ಬರುವುದಿಲ್ಲವೆಂದು ಉತ್ತರಿಸುತ್ತಾರೆ. ನಿ.ಪಿ.1 ಅಧಿಕಾರ ಪತ್ರ ಹಾಗೂ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ, ಆಂಗ್ಲ ಭಾಷೆಯಲ್ಲಿಯೇ ಟೈಪು ಮಾಡಲಾಗಿರುತ್ತದೆ ಎಂದರೆ ಸಾಕ್ಷಿದಾರರು, ಹೌದು, ಆದರೆ ಅದನ್ನು ನನಗೆ ಓದಿ ತಿಳಿಸಿರುತ್ತಾರೆಂದು ಉತ್ತರಿಸುತ್ತಾರೆ. ನಾವು ಬಿ.ಎ.ಜಿ ವಕೀಲರನ್ನು ನೇಮಿಸಿಕೊಂಡ ನಂತರ ಈ ಬಗ್ಗೆ ನ್ಯಾಯಾಲಯಕ್ಕೆ ವಕಾಲತ್ ನ್ನು ಸಲ್ಲಿಸಿಯೇ ಇರುವುದಿಲ್ಲವೆಂದರೆ ಸರಿಯಲ್ಲ. ಆ ಕಾರಣಕ್ಕಾಗಿ ತಾರೀಖನ್ನು ಹೇಳಿದರೂ ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಈಗ ನಿ.ಪಿ.7 ನ್ನು ತೋರಿಸಲಾಗಿ, ಸದರಿ ದಾಖಲೆಯನ್ನು ಯಾರು ಬರೆದುಕೊಟ್ಟಿರುತ್ತಾರೆಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು, ವಕೀಲರು ಬರೆದುಕೊಟ್ಟಿರುತ್ತಾರೆಂದು ಉತ್ತರಿಸುತ್ತಾರೆ. ನನಗೆ ದಾಖಲೆಗಳಲ್ಲಿ ತಾರೀಖು ಗೊತ್ತಾಗುತ್ತದೆ ಆದರೆ ಆಂಗ್ಲ ಭಾಷೆಯಲ್ಲಿ ಬರೆದ ವಿಷಯ ಗೊತ್ತಾಗುವುದಿಲ್ಲ. ನಿ.ಪಿ.7 ರಲ್ಲಿ ಮೂರನೇ ವಾದಿ ಹಾಗೂ ನನ್ನ ಸಹಿ ಇರುತ್ತದೆ. ನಿ.ಪಿ.7 ರಲ್ಲಿ ಇರುವ ಮೂರನೇ ವಾದಿಯ ಸಹಿಗೂ ಹಾಗೂ ನ್ಯಾಯಾಲಯದಲ್ಲಿ ದಾವೆ ಸಲ್ಲಿಸುವ ಕಾಲದಲ್ಲಿ ಸಲ್ಲಿಸಿದ ವಕಾಲತ್ ನ ಮೂರನೇ ವಾದಿಯ ಸಹಿಗೂ ಅಜಗಜಾಂತರ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿದಾರರು ಸದರಿಯವರು ರೋಗಿಯಾಗಿದ್ದು, ಸಹಿಯಲ್ಲಿ ವ್ಯತ್ಯಾಸವಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಮೂರನೇ ವಾದಿಗೆ ಯಾವ ರೋಗ ಇರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು, ಅವರಿಗೆ ನಡೆಯಲಿಕ್ಕಾಗಲಿ, ಕೂರಲಿಕ್ಕಾಗಲಿ ಬರುವುದಿಲ್ಲ. ನಿರ್ದಿಷ್ಟವಾಗಿ ಯಾವ ರೋಗ ಇದೆ ಎಂದು ವೈದ್ಯರನ್ನೇ ಕೇಳಬೇಕು ಎಂದು ಉತ್ತರಿಸುತ್ತಾರೆ. ನಿ.ಪಿ.7 ದಾಖಲೆಗೆ ಪೂರಕವಾಗಿ ಮೂರನೇ ವಾದಿಗೆ ನಿರ್ದಿಷ್ಟವಾಗಿ ಯಾವ ರೋಗ ಇರುತ್ತದೆ ಎನ್ನುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲವೆಂದರೆ ಸರಿ. ನಿ.ಪಿ.7 ದಾಖಲಾತಿಯಲ್ಲಿ ಹಾಗೂ ವಕಾಲತ್ ನಲ್ಲಿರುವ ಸಹಿಗಳು ಮೂರನೇ ವಾದಿಯ ಸಹಿಗಳಾಗಿರುವುದಿಲ್ಲ, ಸದರಿ ಸಹಿಗಳನ್ನು ನಾನೇ ಖೊಟ್ಟಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ.

ಎರಡನೇ ವಾದಿಯಾದ ಶಾಂತವ್ವ ಬೆಳಗಾವಿಯ ನ್ಯಾಯಾಲಯದಲ್ಲಿ ಅಸಲುದಾವಾ ಸಂಖ್ಯೆ 128/2020 ರ ಪ್ರಕಾರ ದಾವೆ ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ದಾವೆ ನಡೆಸಲು ಸ್ವತಃ ಅವರೇ ಹೋಗುತ್ತಾರೆಂದರೆ ಸರಿಯಲ್ಲ.

ವಕೀಲರಿಗೆ ನಾವು ಕೇಸನ್ನು ನೀಡಿದ್ದು, ವಕೀಲರು ದಾವೆ ನಡೆಸುತ್ತಿರುತ್ತಾರೆಂದು ಉತ್ತರಿಸುತ್ತಾರೆ. ಸದರಿ ದಾವೆಯನ್ನು ಎರಡನೇ ವಾದಿ ಅವರ ಸಹೋದರಿಯರು ಹಾಗೂ ವಾರಸುದಾರರುಗಳ ಮೇಲೆ ದಾವೆಯನ್ನು ದಾಖಲಿಸಿರುತ್ತಾರೆ. ನನ್ನ ಪ್ರಕಾರ ನನ್ನ ಮಾವನವರಿಗೆ ಒಟ್ಟು 5 ಜನ ಮಕ್ಕಳಿರುತ್ತಾರೆ. ಅವರುಗಳೆಂದರೆ ಸುವರ್ಣಾ, ಶಾಂತಾ,



-ಶಾರದಾ, ಸುಮಿತ್ರಾ ಹಾಗೂ ಜಯಶ್ರಿ ಅಲಿಯಾಸ್ ರಾಜಶ್ರಿ ಆಗಿರುತ್ತಾರೆ. ಸದರಿ ದಾವೆಯಲ್ಲಿ ಮೂರನೇ ವಾದಿಯನ್ನು ಪ್ರತಿವಾದಿಯಾಗಿ ಮಾಡಿ ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಅವರ ಕುಟುಂಬದ ಸ್ವತ್ತುಗಳ ವಿಭಾಗಕ್ಕಾಗಿ ಸಲ್ಲಿಸಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ಆಸ್ತಿಯನ್ನು ಸೇರಿಸಿರುವುದಿಲ್ಲವೆಂದರೆ, ಸಾಕ್ಷಿದಾರರು ಸಂಪೂರ್ಣ ಆಸ್ತಿಗಳನ್ನು ಸೇರಿಸಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ಆಸ್ತಿ ಸಂಖ್ಯೆ 1935/1, 1935/ಎ, 1935/ಬಿ, ಕಡೋಲ್ಕರ ಗಲ್ಲಿ, ಬೆಳಗಾವಿ, ಹಾಗೂ ಸಿ.ಟಿ.ಎಸ್.ನಂ.104+105 ಬಸವನಗಲ್ಲಿ, ಬೆಳಗಾವಿಗೆ ಸಂಬಂಧಿಸಿದ ಹಾಗೆ ಮಾತ್ರ ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ನನ್ನ ಹೆಂಡತಿಯ ಸಹೋದರಿಯರಲ್ಲಿ ಮೃತ ಪಟ್ಟ ಸಹೋದರಿಯರ ವಾರಸುದಾರರು ಸದರಿ ಸ್ವತ್ತುಗಳಿಗೆ ತಮ್ಮ ಹೆಸರುಗಳನ್ನು ಖಾತೆ ಮಾಡಿಸಲು ಅರ್ಜಿ ನೀಡಿದ ಕಾರಣ ಸದರಿ ಆಸ್ತಿಗಳ ಮೇಲೆ ಮಾತ್ರ ದಾವೆ ಸಲ್ಲಿಸಿರುತ್ತೇವೆಂದು ಉತ್ತರಿಸುತ್ತಾರೆ. ಸದರಿ ಅಸಲು ದಾವಾ ನಂ.128/2020 ರ ವಾದ ಪತ್ರದ ದೃಢೀಕೃತ ನಕಲನ್ನು ಸಾಕ್ಷಿದಾರರಿಗೆ ತೋರಿಸಲಾಗಿ, ಸದರಿ ದೃಢೀಕೃತ ದಾಖಲಾತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ಮೂರನೇ ವಾದಿ ಆರ್.ಎನ್.ತೋಟಿಗೇರ ಎನ್ನುವ ವಕೀಲರನ್ನು ತಮ್ಮ ಪರ ವಕೀಲರನ್ನಾಗಿ ನೇಮಿಸಿಕೊಂಡಿರುತ್ತಾರೆಂದರೆ ಸರಿ. ಅದೇ ರೀತಿ ಸದರಿ ದಾವೆಯಲ್ಲಿ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಸದರಿ ತಕರಾರು ದಾಖಲೆಯನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಅದರಲ್ಲಿರುವ ಸಹಿ ಮೂರನೇ ವಾದಿಯದಾಗಿರುವುದಿಲ್ಲವೆಂದು ಉತ್ತರಿಸುತ್ತಾರೆ. ಸಾಕ್ಷಿದಾರರಿಗೆ ಅಸಲು ದಾವೆ ನಂ.128/2020 ರಲ್ಲಿ ಮೂರನೇ ವಾದಿ ಸಲ್ಲಿಸಿರುವ ವಕಾಲತ್ ನ ದೃಢೀಕೃತ ನಕಲನ್ನು ತೋರಿಸಲಾಗಿ ಸದರಿ ದೃಢೀಕೃತ ನಕಲನ್ನು ನೋಡಿ, ಸಾಕ್ಷಿದಾರರು ಮೂರನೇ ವಾದಿಯ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ನಿ.ಡಿ.2 ಎಂದು, ಸಾಕ್ಷಿದಾರರು ಗುರುತಿಸಿದ ಸಹಿಯನ್ನು ನಿ.ಡಿ.2-ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಈಗ ನ್ಯಾಯಾಲಯದ ಮುಂದೆ ಸಲ್ಲಿಸಿರುವ ನಿ.ಪಿ.7, ನಿ.ಡಿ.2 ಹಾಗೂ ವಾದ ಪತ್ರವನ್ನು ತೋರಿಸಿ ಸದರಿ ಮೂರು ದಾಖಲಾತಿಗಳಲ್ಲಿ ಮೂರನೇ ವಾದಿಯ ಸಹಿ ವ್ಯತ್ಯಾಸ ಇರುತ್ತದೆ ಎಂದರೆ,

ಸಾಕ್ಷಿದಾರರು ಹೌದು, ಮೂರನೇ ವಾದಿ ಆರೋಗ್ಯ ಸರಿ ಇರದ ಕಾರಣ ಅವರ ಸಹಿಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆಯೆಂದು ಉತ್ತರಿಸುತ್ತಾರೆ. ಸದರಿ ಮೂರು ದಾಖಲಾತಿಗಳನ್ನು ಕೈ ಬರಹ ತಜ್ಞರಿಗೆ ಕಳುಹಿಸಿ ವರದಿ ಪಡೆಯಲು ನನ್ನದೇನೂ ತಕರಾರು ಇರುವುದಿಲ್ಲ. -

--14--

ಅಸಲು ದಾವೆ ಸಂಖ್ಯೆ **- 147/2017 (PW-1)**

-ಮೂರನೇ ವಾದಿಗೆ ಆರೋಗ್ಯ ಸರಿ ಇರದ ಕಾರಣ, ಕೈ ನಡುಕ ಇದ್ದು ಸಹಿಗಳಲ್ಲಿ ವ್ಯತ್ಯಾಸವಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಮೂರನೇ ವಾದಿ ಯಾವುದೇ ಕಾಲದಲ್ಲಿಯೂ ದಾವೆ ಸಲ್ಲಿಸಲಾಗಲಿ, ಅಥವಾ ಅವರ ಪರವಾಗಿ ಸಾಕ್ಷಿ ನುಡಿಯುವುದಕ್ಕಾಗಲಿ, ಅಧಿಕಾರ ನೀಡಿರುವುದಿಲ್ಲ, ಸದರಿಯವರಿಗೆ ಗೊತ್ತಾಗದಂತೆ ಅವರ ಸಹಿಯನ್ನು ನಕಲು ಮಾಡಿ ಸುಳ್ಳು ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮೂರು ಜನ ವಾದಿಗಳನ್ನು ಈ ಬಗ್ಗೆ ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿದಾರರು, ಆರೋಗ್ಯ ಸರಿ ಇದ್ದರೆ ಕರೆದುಕೊಂಡು ಬರುತ್ತೇನೆಂದು ಉತ್ತರಿಸುತ್ತಾರೆ. ಈ ಬಗ್ಗೆ ಮೂರನೇ ವಾದಿ ದಾವೆಯನ್ನು ಇತರೆ ವಾದಿಗಳ ಜೊತೆ ಸಲ್ಲಿಸಿರುವ ಬಗ್ಗೆ ಹಾಗೂ ಪ್ರಸ್ತುತ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ಅಧಿಕಾರ ನೀಡಿರುವ ಬಗ್ಗೆ ನ್ಯಾಯಾಲಯದ ನಿಯೋಗಿಯನ್ನು ನೇಮಿಸಿ ವಿಚಾರಣೆ ಮಾಡಲು, ನಿಮ್ಮದೇನಾದರೂ ತಕರಾರು ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಯಾವುದೇ ರೀತಿಯ ತೊಂದರೆ ಇರುವುದಿಲ್ಲವೆಂದು ಉತ್ತರಿಸುತ್ತಾರೆ.

(ಈ ಹಂತದಲ್ಲಿ ಎರಡನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ

ದಿನಾಂಕ 13-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ಶ್ರೀ.ವಾಯ್.ಜಿ.ಜಿ. ವಕೀಲರಿಂದ</u>**

3ನೇ ವಾದಿಗೆ ಆರೋಗ್ಯ ಸರಿ ಇರುವುದಿಲ್ಲ. ಈಗಲೂ ಚೇತರಿಸಿಕೊಂಡಿಲ್ಲ. ಮೊದಲು ಆಸ್ಪತ್ರೆಯಲ್ಲಿ ದಾಖಲು ಇದ್ದರು ಆದರೆ ಈ ದಾಖಲಿಲ್ಲ. ನಾನು 1 ರಿಂದ 3 ನೇ ವಾದಿಯರನ್ನು ನ್ಯಾಯಾಲಯದಲ್ಲಿ ಹಾಜರು ಇಡಲು ಪ್ರಯತ್ನ ಮಾಡಿರುವುದಿಲ್ಲ. 3ನೇ ವಾದಿ ಯಾವ ದಿನಾಂಕದಂದು ನನಗೆ ಅಧಿಕಾರ ಪತ್ರ ನೀಡಿದರೆಂದು ನೆನಪಿಲ್ಲ. ವಾದಿಯರನ್ನು ನಾನು ನ್ಯಾಯಾಲಯದಲ್ಲಿ ಹಾಜರು ಇಡಬಲ್ಲೆ.

(ಈ ಹಂತದಲ್ಲಿ ಎರಡನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ

ದಿನಾಂಕ 19-10-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ಶ್ರೀ.ವಾಯ್.ಜಿ.ಜಿ. ವಕೀಲರಿಂದ**

1 ರಿಂದ 3ನೇ ವಾದಿಯರು ಬೇರೆ ಬೇರೆ ದಿವಸ ಈ ದಾವೆಯನ್ನು ನಡೆಸಲು ನನಗೆ ಅಧಿಕಾರವನ್ನು ನೀಡಿದ್ದಾರೆ. ಜಿಪಿಎ ಕೊಡುವ ದಿವಸ ಎಲ್ಲರು ಜಿಪಿಎ ಕೊಡುವ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ . ಖಾನಾಪೂರದ ಒಬ್ಬ ನೋಟರಿ ವಕೀಲರ ಮುಂದೆ ಜಿಪಿಎ ಯನ್ನು ನೀಡಲಾಯಿತು ಆ ವಕೀಲರ ಹೆಸರು ನನಗೆ ನೆನಪಿಲ್ಲ. ಒಬ್ಬ ವಕೀಲರ ಹೆಸರು ಪಾಟೀಲ ಇನ್ನೊಬ್ಬರ ಹೆಸರು ನೆನಪಿಲ್ಲ. ಜಿಪಿಎಗೆ ನನ್ನ ಹಾಗೂ ವಾದಿಯರ ಫೋಟೊಗಳನ್ನು ಅಂಟಿಸಲಾಗಿದೆ. 1 ಮತ್ತು 2 ನೇ ವಾದಿ ನೀಡಿದ ಜಿಪಿಎಯಲ್ಲಿ ಫೊಟೋದ ಮೇಲೆ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ವಕೀಲರು ಹೇಗೆ ಹೇಳಿದ್ದರೋ ಆ ರೀತಿ ಸಹಿ ಮಾಡಿದ್ದೇವು ಎಂದು ನುಡಿಯುತ್ತಾರೆ. ಸಾಕ್ಷಿದಾರರಿಗೆ ನಿಪಿ-7 ನ್ನು ತೋರಿಸಿ ಅದರಲ್ಲಿ Executrix ಹಾಗೂ 2ನೇ ಸಾಕ್ಷಿದಾರರಾರಿ ಸಹಿ ಹಾಕಿರುವ ಎರಡು ಸಹಿಗಳನ್ನು ಒಬ್ಬರೇ ವ್ಯಕ್ತಿಗಳು ಮಾಡಿದ್ದರೆ ಎಂದು ಸೂಚಿಸಿದರೆ ಸರಿಯಲ್ಲ. ಇಲ್ಲಿ ಇರುವ ಸಹಿಗೂ ಹಾಗೂ ನಿಡಿ-2 ರಲ್ಲಿ ಇರುವ ಸಹಿಗಳಿಗೂ ವ್ಯತ್ಯಾಸ ಇದೆ ಎಂದರೆ ಇರಬಹುದು ಆದರೆ ಮಾಡಿದ ವ್ಯಕ್ತಿ ಒಬ್ಬರೇ ಇರುತ್ತಾರೆ. ಸದರಿ ಸಹಿಗಳನ್ನು ಪರಿಶೀಲಿಸಲು ಎಫ ಎಸ್ ಎಲ್‌ಗೆ ಕಳುಹಿಸಲು ನನ್ನ ತಕರಾರು ಇರುವುದಿಲ್ಲ. 3ನೇ ವಾದಿಯು ಎಂದಿಗೂ ಖಾನಾಪೂರಕ್ಕೆ ಬಂದಿಲ್ಲ ಹಾಗೂ ನನಗೆ ಜಪಿಎ ನೀಡಿಲ್ಲ ಎಂದರೆ ಸರಿಯಲ್ಲ. ನಾನೇ ಸದರಿ ಸಹಿಯನ್ನು ಸೃಷ್ಟಿಸಿ ಖೋಟ್ಟಿ ಜಿಪಿಎ ತಯಾರಿಸಿದ್ದೇನೆಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ 3ನೇ ವಾದಿ ಇಂದು ನ್ಯಾಯಾಲಯದ ಮುಂದೆ ಹಾಜರಾಗಿಲ್ಲ ಎಂದರೆ ಸಾಕ್ಷಿಯು ಅವಳು ಮಾನಸಿಕವಾಗಿ ಅಸ್ವಸ್ಥೆ ಇರುವುದರಿಂದ ಹಾಜರಾಗಿರುವುದಿಲ್ಲ ಎನ್ನುತ್ತಾರೆ. ಸದರಿ ಅಂಶವನ್ನು ತೋರಿಸಲು ನಾನು ವೈದ್ಯರ ಪ್ರಮಾಣ ಪತ್ರವನ್ನು ಹಾಜರು ಮಾಡಿರುವುದಿಲ್ಲ.

ನಮ್ಮ ಮೂಲ ಊರು ಪಾರಿಶ್ವಾಡ. ಪಾರಿಶ್ವಾಡದಲ್ಲಿ ಹಲವಾರು ಓಣಿಗಳು ಇವೆ. ಪೇಟೆ ಓಣಿ, ಬಡಿಗೇರ ಓಣಿ, ದ್ಯಾಮವ್ವನ ಗುಡಿ ಓಣಿ, ಕುಕಡೋಳ್ಳಿಯವರ ಓಣಿ, ಹುಲಿಕೇರಿ ಓಣಿ ಹಾಗೂ ಹಲವಾರು ಓಣಿಗಳು ಇವೆ. ವಾದಿಗಳ ತಂದೆಗೆ ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ . ಅಡಿವೇಪ್ಪನಿಗೆ ಒಟ್ಟು 5 ಜನ ಹೆಣ್ಣು ಮಕ್ಕಳು. ವಾದಿಯರನ್ನು ಹೊರತು ಪಡಿಸಿ ಶಾರದಾ ಹಾಗೂ

ಸುಮಿತ್ರಾ ಎಂಬ ಎರಡು ಹೆಣ್ಣು ಮಕ್ಕಳು ಅಡಿವೇಪ್ಪನಿಗೆ ಇದ್ದರು. ಅವರಿಬ್ಬರೂ ಈಗ ತೀರಿಕೊಂಡಿದ್ದಾರೆ. ತೀರಿಹೋದವರಿಗೆ ಯಾವುದೇ ವಾರಸದಾರು ಇರುವುದಿಲ್ಲ. ಅವರಿಬ್ಬರಿಗೂ ಮಕ್ಕಳು ಇರುವುದಿಲ್ಲ. ಆದರೆ ಅವರಲ್ಲಿ ಸುಮಿತ್ರಾ ಇವಳಿಗೆ ಸುಭಾಷ ಎನ್ನುವವರ ಜೊತೆ ಮದುವೆಯಾಗಿತ್ತು. ಸುಭಾಷ ಕೂಡ ಪಾರಶ್ವಾಡದವರೇ ಎಂದರೆ ಸರಿ . ಪಾರಿಶ್ವಾಡದಲ್ಲಿ ನನಗೆ ಸೇರಿದ ಆಸ್ತಿಗಳು ಇರುತ್ತವೆ. ಈ ಪ್ರಕರಣ ನನ್ನ ಹೆಂಡತಿ ಆಸ್ತಿಗೆ ಸಂಬಂಧಿಸಿದ್ದು ಇರುತ್ತದೆ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಅಡಿವೆಪ್ಪನಿಗೆ ಬೇರೆ ಆಸ್ತಿಗಳು ಇವೆ ಎಂದರೆ ಸರಿ .ನಾನು ಅಡಿವೆಪ್ಪನ ಮನೆಗೆ ಅಳಿಯತನಕ್ಕೆ ಇದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ನಾನು ಇದ್ದೇನೆ.

ಈ ಪ್ರಕರಣದಲ್ಲಿ ನಾನು 188/ಎ ಆಸ್ತಿಗೆ ಸಂಬಂಧ ಪಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ. ಈ ಜಾಗೆ ಎಲ್ ಆಕಾರದಲ್ಲಿ ಇದೆ. ಸದರಿ ಆಸ್ತಿಯ ಉದ್ದ ಮತ್ತು ಅಗಲ ನನಗೆ ಹೇಳಲು ಬರುತ್ತದೆ. 10.5 ಮಳ ಅಗಲ (ಪೂರ್ವ ಪಶ್ಚಿಮ) ಹಾಗೂ 22.5 ಮಳಾ ಉದ್ದ (ಉತ್ತರ ದಕ್ಷಿಣ) ಒಂದು ಭಾಗ ಇರುತ್ತದೆ. ಮತ್ತೊಂದು ಭಾಗ 9.5 ಮಳಾ ಅಗಲ (ಉತ್ತರ ದಕ್ಷಿಣ) ಹಾಗೂ 23 ಮಳಾ ಉದ್ದ (ಪೂರ್ವ ಪಶ್ಚಿಮ) ಇರುತ್ತದೆ.

ಶಾರದಾ ಇವಳ ಗಂಡನ ಹೆಸರು ಪ್ರಕಾಶ ಜಕಾತಿ ಎಂದರೆ ಸರಿಯಲ್ಲ, ಅವರ ಮದುವೆ ಮೊದಲು ನಿಶ್ಚಯವಾಗಿ ನಂತರ ಮುರುಗಡೆ ಆಗಿರುತ್ತದೆ. ಶಾರದಾ ರವರು ದಿಃ27.06.2010 ತೀರಿಕೊಂಡಿರುತ್ತಾರೆ ಎಂದರೆ ಸರಿ . 3ನೇವಾದಿಯು ಬೆಳಗಾವಿಯ ಮಾನ್ಯ 4ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯದಲ್ಲಿ ಇರುವ ಅಸಲು ದಾವಾ ನಂ.128/2020 ರಲ್ಲಿ ತಮ್ಮ ಕೈಫಿಯತನಲ್ಲಿ ಶಾರದಾ ರವರಿಗೆ ಪ್ರಕಾಶ ಜಕಾತಿ ಎನ್ನುವ ಗಂಡ ಇದ್ದಾರೆ ಎಂದು ಒಪ್ಪಿ ಕೊಂಡಿರುತ್ತಾರೆ ಎಂದರೆ ಇರಬಹುದು. ಪ್ರಕಾಶ ರವರು ಈಗ ಸದ್ಯಕ್ಕೆ ಧಾರವಾಡದಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಕಾಶ ಹಾಗೂ ಸುಭಾಷ ಇವರನ್ನು ಈ ಪ್ರಕರಣದಲ್ಲಿ ನಾವು ಪಕ್ಷಗಾರರನ್ನಾಗಿ ಮಾಡುವುದಿಲ್ಲ ಅದಕ್ಕೆ ನಮ್ಮ ತಕರಾರು ಇರುತ್ತದೆ. ಏಕೆಂದರೆ ಅವರು ವಾರಸುದಾರರು ಅಲ್ಲ. ಸುಭಾಷ ಎನ್ನುವರು ಬೆಳಗಾವಿಯ ನ್ಯಾಯಾಲಯಲ್ಲಿ ಇರುವ ದಾವೆಯಲ್ಲಿ ಪಕ್ಷಗಾರರು ಇದ್ದಾರೆ ಎಂದರೆ ಇದ್ದರು ಇರಬಹುದು. ಪ್ರಕಾಶ ಹಾಗೂ ಸುಭಾಷ ಇವರು ವಾರಸುದಾರರು ಇದ್ದರು ಸಹಿತ ನಾವು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ

ಎಂದರೆ ಸರಿಯಲ್ಲ. ದಾವಾ ಆಸ್ತಿ 188/ಎ ಮೊದಲು ಪೇಟೆ ಓಣಿ ಹಾಗೂ ಅಕ್ಕಿ ಓಣಿಯಲ್ಲಿ ಇತ್ತು ಆದರೆ ಈಗ ಸದರಿ ಓಣಿ ಹೆಸರು ಬದಲಾಗಿದೆ. ಸದರಿ ಓಣಿಯ ಹೆಸರು ಬದಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನಾನು ಹಾಜರು ಮಾಡಿಲ್ಲ. ಈಗ ಸದ್ಯಕ್ಕೆ ದಾವಾ ಆಸ್ತಿಯು ಹುಬ್ಬಳ್ಳಿಯವರ ಓಣಿಯಲ್ಲಿ ಇದೆ. ಸದರಿ ದಾವಾ ಆಸ್ತಿಯು ಹುಬ್ಬಳ್ಳಿಯವರ ಓಣಿಯಲ್ಲಿ ಇದೆ ಎಂದು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ . ನಾವು ಖರೀದಿ ಪತ್ರದ ಪ್ರಕಾರ ಬರೆದಿದ್ದೇವೆ. ದಿಃ 04.12.1924 ರಂದು ಖರೀದಿ ಆಗಿರುತ್ತದೆ. ಗುರಾಚಯ್ಯಾ ಕಂಬಳಿಮಠ ಇವರು ಸಂಗನಬಸ್ಸಪ್ಪಾ ಧಾರವಾಡ ಇವರಿಗೆ ಖರೀದಿ ನೀಡಿದ್ದರು. ನಾನು ಖರೀದಿ ಪತ್ರವನ್ನು ನೋಡಿದ್ದೇನೆ. ಸದರಿ ಖರೀದಿ ಪತ್ರ ಮುಡಿ ಭಾಷೆಯಲ್ಲಿರುತ್ತದೆ. ಮೂಡಿ ಭಾಷೆ ನನಗೆ ಪೂರ್ತಿಯಾಗಿ ಬರುವುದಿಲ್ಲ ಆದರೆ ನನಗೆ ಅರ್ಧಮರ್ಧ ತಿಳಿಯುತ್ತದೆ. ಸದರಿ ಖರೀದಿ ಪತ್ರವನ್ನು ಪಾಟೀಲ ವಕೀಲರಿಗೆ ನಾವು ಭಾಷಾಂತರ ಮಾಡಲು ನೀಡಿದ್ದೇವು ಅವರು ಭಾಷಾಂತರ ಮಾಡಿ ನಮಗೆ ನೀಡಿದ್ದರು. ಪಾಟೀಲ ವಕೀಲರೆ ಭಾಷಾಂತರ ಮಾಡಿದ್ದಾರೆಂದು ಯಾವುದಾದರೂ ಪ್ರಮಾಣ ಪತ್ರ ನೀಡಿದ್ದಾರೆ ಎಂದು ಸೂಚಿಸಿದರೆ ಸಾಕ್ಷಿಯು ಅವರು ಸಿಕ್ಕಾ ಹಾಕಿದ್ದಾರೆ ಎಂದು ನುಡಿದಿರುತ್ತಾರೆ. ಸಾಕ್ಷಿದಾರರಿಗೆ ನಿಪಿ-12(ಎ) ಎಂದು ತೋರಿಸಿ ಇದರಲ್ಲಿ ಯಾವುದೇ ಸಿಕ್ಕಾ ಇರುವುದಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ಮೊದಲು ಸಿಕ್ಕಾ ಹಾಕಿ ನೀಡಿದ್ದರು ಎನ್ನುತ್ತಾರೆ. ಸದರಿ ಸಿಕ್ಕಾ ಹಾಕಿರುವ ಕಾಗದವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ವಕೀಲರು ಹಾಜರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪಾಟೀಲ ವಕೀಲರು ತಾವೇ ತರ್ಜುಮೆ ಮಾಡಿದ ಬಗ್ಗೆ ಯಾವುದೇ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ . ನಿಪಿ-12 ರಲ್ಲಿ ದಾವಾ ಆಸ್ತಿ ಪೇಟೆ ಓಣಿಯಲ್ಲಿ ಇರುತ್ತದೆ ಎಂದು ಬರೆದಿರುತ್ತಾರೆ. ಪೇಟೆ ಓಣಿ ಹಾಗೂ ಹುಬ್ಬಳ್ಳಿ ಓಣಿ ಬೇರೆ ಬೇರೆ ಎಂದರೆ ಸಾಕ್ಷಿಯು ಮೊದಲು ಪೇಟೆ ಓಣಿ/ ಅಕ್ಕಿ ಓಣಿ ಎಂದು ಇತ್ತು ಈಗ ಹುಬ್ಬಳ್ಳಿ ಓಣಿ ಆಗಿದೆ. ಪಂಚಾಯತಿಯಲ್ಲಿ ಈ ಬಗ್ಗೆ ಯಾವುದೇ ಠರಾವು ಆಗಿರುವುದಿಲ್ಲ. ನಿಪಿ-12(ಎ) ಖೋಟ್ಟಿ ದಾಖಲೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-12 ಕ್ಕೂ ಹಾಗೂ 12(ಎ) ಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಗುರಾಚಯ್ಯರವರು ಪೊಲೀಸ ಪಾಟೀಲ ಇದ್ದರು ಎಂದರೆ ಸರಿ . ಊರಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಮಾಡಬೇಕಾದರೆ ಪೊಲೀಸ ಪಾಟೀಲರೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಯಾವುದಾದರು ತಂಟೆಗಳು ಇದ್ದರೇ ಮಾತ್ರ ಬಗೆಹರಿಸುತ್ತಿದ್ದರು. ನಾನು ಈ ರೀತಿ ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನನ್ನ ಪ್ರಕಾರ 1952ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಬಂದಿರುತ್ತದೆ. ನನ್ನ ಪ್ರಕಾರ 1924 ರ ಖರೀದಿ ಪತ್ರದ ಖರೀದಿದಾರರ ಹೆಸರು ದಾವಾ ಆಸ್ತಿಯ ಉತಾರದಲ್ಲಿ 1952 ನೇ ಸಾಲಿನಿಂದಲೂ ಎಂಟ್ರಿ ಇರುತ್ತದೆ. ಸದರಿ ವಿಷಯವನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ನಿಪಿ-13 ರಲ್ಲಿ ಸಂಗಬಸಪ್ಪಾ ಧಾರವಾಡ ಇವರ ಹೆಸರಿನಲ್ಲಿ 178ಎ ಆಸ್ತಿ ಇರುತ್ತದೆ. ನಾವು ಈ ಪ್ರಕರಣ ದಾಖಲಿಸಿರುವುದು 188 ಆಸ್ತಿಗೆ . ಆಸ್ತಿ 178ಎ ಹಾಗೂ 188 ಬೇರೆ ಬೇರೆ ಎಂದರೆ ಸರಿಯಲ್ಲ. ಎರಡು ಆಸ್ತಿಗಳು ಅಕ್ಕಪಕ್ಕ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ದಾವಾ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ . ನಿಪಿ-12 ರಲ್ಲಿ ಆಸ್ತಿ ನಂಬರ ನಮೂದು ಇಲ್ಲ ಎಂದರೆ ಸರಿ .ಆಗ ಪಂಚಾಯತಿ ಅಸ್ತಿತ್ವದಲ್ಲಿ ಇರಲಿಲ್ಲ. ಆಸ್ತಿಗಳನ್ನು ಸಾಮಾನ್ಯವಾಗಿ ಅದರ ನಂಬರ ಮೇಲೆ ಗುರುತಿಸುತ್ತಾರೆ ಎಂದರೆ ಸಾಕ್ಷಿಯು ಚೆಕ್‌ಬಂದಿಯ ಮೇಲೆ ಗುರುತಿಸಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು ಪಂಚಾಯತಿ ಅಸ್ತಿತ್ವಕ್ಕೆ ಬಂದ ನಂತರ ನಂಬರಗಳ ಮೇಲೆ ಗುರುತಿಸುತ್ತಾರೆ ಎಂದು ನುಡಿಯುತ್ತಾರೆ. ಬೆಳಗಾವಿಯಲ್ಲಿ ಹಾಕಿರುವ ದಾವೆಯಲ್ಲಿ ಈ ದಾವೆಯ ದಾವಾ ಆಸ್ತಿಯನ್ನು ನಮ್ಮ ಆಸ್ತಿ ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಂಗನಬಸಪ್ಪಾ ಧಾರವಾಡ ಯಾವಾಗ ತೀರಿಕೊಂಡರೆಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರಿಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳು. ನಿಪಿ-14 ರಲ್ಲಿ ಸಂಗನಬಸಪ್ಪಾ ಇವರಿಗೆ ಆಸ್ತಿ ನಂ. 178ಎ ಆಸ್ತಿ ಇರುತ್ತದೆ ಎಂದು ಬರೆಯಲಾಗಿರುತ್ತದೆ ಎಂದು ಸೂಚಿಸಿದರೆ ಸರಿ . ಸದರಿ ಭಾಗವನ್ನು ನಿಪಿ-14(ಎ) ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಪಂಚಾಯತಿಯ ನಂಬರಗಳು ಆಗಿಂದಾಗೆ ಬದಲಾಗುತ್ತವೆ ಎಂದು ನುಡಿಯತ್ತಾರೆ. ಪಂಚಾಯತಿಯ ಆಸ್ತಿಗಳ ನಂಬರಗಳು ಬದಲಾದ ಬಗ್ಗೆ ತೋರಿಸಲು ದಾಖಲೆಗಳನ್ನು ನಾವು ಹಾಜರು ಮಾಡಿಲ್ಲ ಎಂದರೆ ಸರಿ . ಉತಾರಗಳನ್ನು ಹಾಜರು ಮಾಡಿರುತ್ತೇನೆ. ಸದರಿ ನಿಪಿ-14 ರಲ್ಲಿ ಆಸ್ತಿಯು ಹುಬ್ಬಳ್ಳಿಯವರ ಓಣಿಯಲ್ಲಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ವಾದಿಯರ ಅಜ್ಜ ಸಂಗನಬಸಪ್ಪಾ

ಧಾರವಾಡ ಹಾಗೂ ಅವರ ಮಗ ಅಡಿವೆಪ್ಪಾ ತಮ್ಮ ಜೀವಿತಾ ಕಾಲದಲ್ಲಿ ಪ್ರತಿವಾದಿಯರ ಮೇಲಾಗಲೀ ಅಥವಾ ಅವರ ಹಿರಿಯರ ಮೇಲಾಗಲೀ ದಾವಾ ಆಸ್ತಿಗೆ ಸಂಬಂಧ ಪಟ್ಟ ಹಕ್ಕಿನ ಸಲುವಾಗಿ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಅಡಿವೆಪ್ಪಾ ಧಾರವಾಡ ಈತನು 2000 ಸಾಲಿನಲ್ಲಿ ತೀರಿಕೊಂಡರು. ಅರಿವೆಪ್ಪನಿಗೆ ಎಷ್ಟು ಜನ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿ . ಅಡಿವೆಪ್ಪಾ ದಾವಾ ಆಸ್ತಿಯ ಮಾಲಿಕನಿದ್ದನು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸಾಕ್ಷಿಯು ಉತಾರವನ್ನು ಹಾಜರು ಮಾಡಿದ್ದೇವೆ ಎಂದು ನುಡಿಯತ್ತಾರೆ. ಉತಾರವನ್ನು ಹೊರತು ಪಡಿಸಿ ಬೇರೆ ಯಾವ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಈ ಪ್ರಕರಣದ ವಾದಿಯರು ಅಡಿವೆಪ್ಪಾ ತೀರಿಹೋದ ನಂತರ ಈ ದಾವಾ ಆಸ್ತಿಯ ದಾಖಲೆಗಳಲ್ಲಿ ಅವರ ಹೆಸರುಗಳನ್ನು ಹಚ್ಚಲು ಯಾವುದೇ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿ. ಏಕೆಂದರೆ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿ ಇತ್ತು. ಈ ಆಸ್ತಿಯನ್ನು ಹೊರತು ಪಡಿಸಿ ಬೇರೆಲ್ಲಾ ಆಸ್ತಿಗಳನ್ನು 3 ವರ್ಷಗಳ ಹಿಂದೆ ವಾದಿಯರು ತಮ್ಮ ಹೆಸರುಗಳನ್ನು ಹಚ್ಚಿ ಕೊಂಡಿದ್ದಾರೆ. ವಾದಿಯರಿಗೆ ದಾವಾ ಆಸ್ತಿ ಸಂಬಂಧ ಇರದೇ ಇರುವ ಕಾರಣ ವಾದಿಯರು ದಾವಾ ಆಸ್ತಿಯಲ್ಲಿ ತಮ್ಮ ಹೆಸರನ್ನು ಹಚ್ಚಲು ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅರ್ಜಿ ನೀಡಿದ್ದಾಗೆ ಗ್ರಾಮ ಪಂಚಾಯತಿಯವರು ದಾವೆ ಇದೆ ಎಂದು ಹೇಳಿ ವಾದಿಯರ ಹೆಸರನ್ನು ಹಚ್ಚಿ ರುವುದಿಲ್ಲ. ಸದರಿ ಅರ್ಜಿಯ ಪ್ರತಿಯನ್ನು ನಾನು ಈ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

(ಈ ಹಂತದಲ್ಲಿ ಎರಡನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ

ದಿನಾಂಕ 11-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎರಡನೇ ಪ್ರತಿವಾದಿ ಪರ ಶ್ರೀ.ವಾಯ್.ಜಿ.ಜಿ. ವಕೀಲರಿಂದ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೋ, ಇಲ್ಲವೋ ಎಂದು ಈಗ ನೆನಪಿಲ್ಲ. ನಾನು ಮುಕ್ತಿಯಾರ ಪತ್ರದ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ನಾನು ಸಾಕ್ಷಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದು, ಅದರಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ಹಾಗೂ ವಾದಿಯರು ನೀಡಿದ ಮಾಹಿತಿ ಆಧಾರದ ಮೇಲೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲಾಯಿತು. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿ ಚೆಕ್ ಬಂದಿ ಹಾಗೂ ಅಳತೆಗಳನ್ನು ಉಲ್ಲೇಖ ಮಾಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿದಾರರಿಗೆ ಈಗ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ದಾವಾ ಆಸ್ತಿಯ ಚೆಕ್‌ಬಂದಿ ಹಾಗೂ ಅಳತೆ ಎಲ್ಲಿ ನಮೂದು ಮಾಡಲಾಗಿದೆ ಎಂದು ಕೇಳಿದರೆ, ಸಾಕ್ಷಿದಾರರು ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲ , ಹೀಗಾಗಿ ಸದರಿ ವಿಷಯವನ್ನು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಷಯಗಳನ್ನು ನಮ್ಮ ವಕೀಲರಿಂದ ಕನ್ನಡ ಭಾಷೆಯಲ್ಲಿ ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಚೆಕ್ ಬಂದಿ ಹಾಗೂ ಅಳತೆಯ ಉಲ್ಲೇಖ ಇಲ್ಲದೇ ಇರುವ ಕಾರಣ, ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಯು ಪಾರಿಶ್ವಾಡ ಗ್ರಾಮದ ಮಧ್ಯಕ್ಕೆ ಬರುತ್ತದೆ. ದಾವಾ ಆಸ್ತಿಯ ಅಕ್ಕಪಕ್ಕ ಮನೆಗಳು ಇರುತ್ತವೆ. ದಾವಾ ಆಸ್ತಿಯ ಪೂರ್ವಕ್ಕೆ ನಮ್ಮ ಹಾಗೂ ಅಂಗಡಿಯವರ ಮನೆ ಇದೆ, ಉತ್ತರಕ್ಕೂ ಕೂಡ ನಮ್ಮದೇ ಆಸ್ತಿ ಇದೆ, ಪಶ್ಚಿಮಕ್ಕೆ ಪ್ರತಿವಾದಿಯರ ಜಾಗೆ ಇದೆ, ದಕ್ಷಿಣಕ್ಕೆ ರಾಜಮಾರ್ಗವಿದೆ. ಇನ್ನೊಂದು ಆಸ್ತಿಯ ಪೂರ್ವ, ಉತ್ತರ ಹಾಗೂ ಪಶ್ಚಿಮಕ್ಕೆ ನಮ್ಮದೇ ಆಸ್ತಿ ಇದೆ, ದಕ್ಷಿಣಕ್ಕೆ ಪ್ರತಿವಾದಿಯರ ಆಸ್ತಿ ಇದೆ. ನಮ್ಮ ದಾವೆಯಲ್ಲಾಗಲೀ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಎರಡು ಆಸ್ತಿಗಳು ಎಂದು ನಮೂದು ಮಾಡಿರುವುದಿಲ್ಲ, ಆದರೆ ಅವರೆಡರೂ ಆಸ್ತಿಗಳು ಒಂದೇ ನಂಬರ ಆಗಿರುತ್ತವೆ. ನನಗೆ ಸುಮಾರು 1970 ನೇ ಇಸವಿಯಿಂದಲೇ ಸಂಗನಬಸಪ್ಪಾ

ಧಾರವಾಡ ಇವರು ಗುರುಚಯ್ಯಾ ರಾಚಯ್ಯಾ ಕಂಬಳಿಮಠ ಇವರಿಂದ ಆಸ್ತಿಯನ್ನು ಖರೀದಿಸಿದರು ಎಂಬ ಬಗ್ಗೆ ಗೊತ್ತಿದೆ. ಸಂಗನಬಸಪ್ಪಾ ಧಾರವಾಡ ಇವರ ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ಖರೀದಿ ಪತ್ರದ ಆಧಾರದ ಮೇಲೆ ದಾಖಲಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ. ಸಂಗನಬಸಪ್ಪಾ ಧಾರವಾಡ ಇವರ ಹೆಸರು ದಾಖಲಾಗಿಲ್ಲ, ಆದರೆ ಅವರ ಮಗ ಅಡಿವೆಪ್ಪಾ ಧಾರವಾಡ ಇವರ ಹೆಸರು ದಾಖಲಾಗಿದೆ. ನಾವು ಖರೀದಿ ಪತ್ರದ ಹಾಗೂ ಪಂಚಾಯತಿ ಉತಾರದ ಆಧಾರದ ಮೇಲೆ ಈ ಪ್ರಕರಣ ದಾಖಲಿಸಿದ್ದೇವೆ. ಅಡಿವೆಪ್ಪಾ ಧಾರವಾಡ ಇವರ ಹೆಸರು ಖರೀದಿ ಪತ್ರದ ಪ್ರಕಾರ ದಾಖಲಾಗಿತ್ತು. ಖರೀದಿಯನ್ನು ಸಂಗನಬಸಪ್ಪಾ ಧಾರವಾಡ ಇವರು ಪಡೆದುಕೊಂಡಿದ್ದರು. ಪಂಚಾಯತಿಯ ಉತಾರವನ್ನು ಹೊರತು ಪಡಿಸಿ ದಾವಾ ಆಸ್ತಿಯ ದಾಖಲೆಗಳಲ್ಲಿ ಅಡಿವೆಪ್ಪಾ ಧಾರವಾಡ ಇವರ ಹೆಸರು ನಮೂದು ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ಪಂಚಾಯತಿಯ ಯಾವ ಠರಾವಿನ ಪ್ರಕಾರ ಅಡಿವೆಪ್ಪಾ ಇವರ ಹೆಸರು ದಾಖಲಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಆದರೆ ಪಂಚಾಯತಿ ಆರಂಭವಾದಾಗಿನಿಂದ ಅವರ ಹೆಸರು ದಾಖಲಾಗಿದೆ. ಮೊದಲು ಪಂಚಾಯತಿಯಲ್ಲಿ ಯಾವುದೇ ಠರಾವು ಇಲ್ಲದೇ ಹೆಸರನ್ನು ಪಂಚಾಯತಿಯಲ್ಲಿ ದಾಖಲಿಸುತ್ತಿದ್ದರು. ಯಾವುದೇ ಠರಾವು ಇಲ್ಲದೇ ಅಡಿವೆಪ್ಪ ರವರ ಹೆಸರನ್ನು ಸೇರಿಸಲಾಗಿದೆ ಎಂಬುದನ್ನು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿರುವುದಿಲ್ಲ. ನಾವು ಖರೀದಿ ತೆಗೆದುಕೊಳ್ಳುವ ಪೂರ್ವ ದಾವಾ ಆಸ್ತಿ ಕಂಬಳಿಮಠ ರವರಿಗೆ ಸೇರಿದ ಆಸ್ತಿ ಆಗಿತ್ತು. ಸದರಿ ಆಸ್ತಿಯಲ್ಲಿ ಎ ಮತ್ತು ಬಿ ಎಂದು ಪಂಚಾಯತಿ ಆರಂಭವಾದಾಗಿನಿಂದಲೇ ವಿಭಾಗ ಮಾಡಲಾಯಿತು. ಉತಾರವನ್ನು ಹೊರತು ಪಡಿಸಿ, ಸದರಿ ಆಸ್ತಿಯನ್ನು ಎ ಮತ್ತು ಬಿ ಎಯಿ ವಿಭಾಗ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ. ದಾವಾ ಆಸ್ತಿಯ ಸುತ್ತಲು ಇರುವ ನಮ್ಮ ಆಸ್ತಿಗಳ ನಂ.149, 150 ಹಾಗೂ ಇನ್ನೊಂದು ಆಸ್ತಿಯ ನಂಬರ ನನಗೆ ನೆನಪಿಲ್ಲ. ನಿಪಿ-9 ರಲ್ಲಿ ದಾವಾ ಆಸ್ತಿಯ ಅಳತೆಯನ್ನು ನಮೂದಿಸಿಲ್ಲ ಎಂದು ಸೂಚಿಸಿದರೆ ಸರಿ . ಆ ಸಮಯದಲ್ಲಿ ಯಾವುದೇ ಆಸ್ತಿಗಳ ನಂಬರ ನಮೂದು ಮಾಡುತ್ತಿರಲಿಲ್ಲ. ನಿಪಿ-9 ಇದು 1996 ರಿಂದ 2022 ರವರೆಗೆ ಎಂದು ತೋರಿಸಲಾಗಿದೆ ಎಂದು ಸೂಚಿಸಿದರೆ ಸರಿ . ಪಂಚಾಯತಿಯ ಯಾವುದೇ ದಾಖಲೆಗಳಲ್ಲಿ ದಾವಾ

ಆಸ್ತಿಯ ಅಳತೆ ನಮೂದು ಇರುವುದಿಲ್ಲ ಎಂದು ಸೂಚಿಸಿದರೆ ಸರಿ . ಖರೀದಿ ಪತ್ರವನ್ನು ಹೊರತು ಪಡಿಸಿದರೆ ದಾವಾ ಆಸ್ತಿಯ ಅಳತೆ ತೋರಿಸಲು ವಹಿವಾಟು ಮಾತ್ರ ಸಾಕ್ಷಿ ಇರುತ್ತದೆ. ಪ್ರತಿವಾದಿಯರೇ ದಾವಾ ಆಸ್ತಿಯ ವಹಿವಾಟಿನಲ್ಲಿ ಇದ್ದರೂ ಸಹಿತ, ನಾವೇ ವಹಿವಾಟಿನಲ್ಲಿ ಇದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾವೇ ದಾವಾ ಆಸ್ತಿಯ ವಹಿವಾಟಿನಲ್ಲಿ ಇರುತ್ತೇವೆಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ. ಪಂಚಾಯತಿ ಆರಂಭವಾದಾಗಿನಿಂದ ಪ್ರತಿ ಮನೆಗಳಿಗೂ ಕರವನ್ನು ತೆಗೆದುಕೊಳ್ಳುತ್ತಾರೆ ಎಂದು ಸೂಚಿಸಿದರೆ ಸರಿ . ದಾವಾ ಆಸ್ತಿಯ ಕರ ಆಕರಣಾ ಯಾದಿಯನ್ನು ನಾವು ಹಾಜರು ಪಡಿಸಿರುವುದಿಲ್ಲ, ಆದರೆ ಕರವನ್ನು ತುಂಬಿರುತ್ತೇವೆ. ಕರವನ್ನು ತುಂಬಿದರೆ ರಸೀದಿಯನ್ನು ಕೊಡುತ್ತಾರೆಂದು ಸೂಚಿಸಿದರೆ ಸರಿ .

ಅಡಿವೆಪ್ಪಾ ಧಾರವಾಡ ಜೀವಂತ ಇದ್ದಾಗ ಆಸ್ತಿ ನಂ.149 ಹಾಗೂ 150 ರಲ್ಲಿ ಇದ್ದರು. ದಾವಾ ಆಸ್ತಿ ಖುಲ್ಲಾ ಜಾಗೆ ಇರುತ್ತದೆ. ಆಸ್ತಿ ನಂ.188/ಬಿ ಹಾಗೂ ಅದಕ್ಕೆ ಹೊಂದಿಕೊಂಡು ಇರುವ ಖುಲ್ಲಾ ಜಾಗೆಯು, 2ನೇ ಪ್ರತಿವಾದಿಗೆ ಅವರ ಅಣ್ಣತಮ್ಮಂದಿರು ಅಸಲು ದಾವೆ ನಂ.31/2017 ರಲ್ಲಿ ಮಾಡಿಕೊಂಡ ರಾಜಿ ಡಿಕ್ರಿ ಪ್ರಕಾರ ಬಂದಿರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ತಂದೆಯ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದಾರೆಂದರೆ, ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿಯರು ಪಾಲು ವಿಭಾಗ ಮಾಡಿಕೊಂಡ ಪ್ರಕರಣದ ನಂಬರ ಗೊತ್ತಿದೆ. ಪ್ರತಿವಾದಿಯರು ಸದರಿ ಡಿಕ್ರಿಯ ಪ್ರಕಾರ ತಮಗೆ ಬಂದ ಆಸ್ತಿಗಳ ದಾಖಲೆಗಳಲ್ಲಿ ಅವರರವರ ಹೆಸರುಗಳನ್ನು ನಮೂದಿಸಿಕೊಂಡಿದ್ದಾರೆ ಎಂದು ಸೂಚಿಸಿದರೆ ಸರಿಯಲ್ಲ. ನಾನು ಪ್ರತಿವಾದಿಯರ ಆಸ್ತಿಗಳ ದಾಖಲೆಗಳನ್ನು ನೋಡಿರುವುದಿಲ್ಲ. ಪ್ರತಿವಾದಿಯರು ತಮಗೆ ರಾಜಿ ಡಿಕ್ರಿಯಲ್ಲಿ ಬಂದ ಆಸ್ತಿಗಳಲ್ಲಿ ವಹಿವಾಟಿನಲ್ಲಿದ್ದಾರೆ ಎಂದು ಸೂಚಿಸಿದರೆ, ಸಾಕ್ಷಿದಾರರು ನಮ್ಮ ಆಸ್ತಿಯನ್ನು ಹೊರತು ಪಡಿಸಿ ಅವರ ಆಸ್ತಿಗಳಲ್ಲಿ ಕಬ್ಜೆಯಲ್ಲಿದ್ದಾರೆ ಎಂದು ನುಡಿಯುತ್ತಾರೆ. ಪಂಚಾಯತಿಯಲ್ಲಿ ಠರಾವನ್ನು ಮಾಡಿ ಪ್ರತಿವಾದಿಯರ ಹೆಸರನ್ನು ಸದರಿ ಆಸ್ತಿಯ ಉತಾರಗಳಲ್ಲಿ ನಮೂದು ಮಾಡಿದ್ದಾರೆ ಎಂದರೆ, ಇರಬಹುದು. ನಾವು ಕ್ಷೇತ್ರದ ಬಗ್ಗೆ ತಕರಾರು ನೀಡಿದ್ದೇವು. ಪಂಚಾಯತಿಯ ಠರಾವುಗಳಲ್ಲಿ ಆಸ್ತಿಗಳ ಅಳತೆಗಳನ್ನು ನಮೂದಿಸಲಾಗಿದೆ ಎಂದು ಸೂಚಿಸಿದರೆ, ಸಾಕ್ಷಿಯು ನಾವು ತಕರಾರನ್ನು ನೀಡಿದ್ದೇವು ಎಂದು ನುಡಿಯುತ್ತಾರೆ. ನಾವು ತಕರಾರು

ನೀಡುವ ಮುನ್ನವೇ ಸದರಿ ಠರಾವು ಆಗಿತ್ತು ಎಂದು ಸೂಚಿಸಿದರೆ ಸರಿಯಲ್ಲ. ದಿಃ 14.02.2018 ರಂದು ಪಂಚಾಯತಿಯಲ್ಲಿ ಸದರಿ ಠರಾವು ಆಗಿರುತ್ತವೆ ಎಂದು ಸೂಚಿಸಿದರೆ ಸರಿ . ಸದರಿ ಠರಾವುಗಳನ್ನು ನಾವು ಎಲ್ಲಿಯೂ ಪ್ರಶ್ನೇ ಮಾಡಿಲ್ಲ. ಪ್ರತಿವಾದಿಯರ ಹೆಸರು ಪಂಚಾಯತಿಯ ದಾಖಲೆಗಳಲ್ಲಿ ನಮೂದು ಆದ ನಂತರ ನಾವು ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿರುತ್ತೇವೆಂದು ಎಂದು ಸೂಚಿಸಿದರೆ ಸರಿಯಲ್ಲ. ಈ ಪ್ರಕರಣದಲ್ಲಿ ದಾವಾ ಆಸ್ತಿಯನ್ನು ಅಳತೆ ಮಾಡಬಾರದು, ಬದಲಾವಣೆ ಮಾಡಬಾರದು ಎಂದು ನಾವು ಅರ್ಜಿ ಸಲ್ಲಿಸಿದ್ದೇವು ಎಂದು ಸೂಚಿಸಿದರೆ, ಸಾಕ್ಷಿದಾರರು ಅಳತೆ ಮಾಡಬಾರದು ಎಂದು ಹಾಕಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅರ್ಜಿಯ ಪ್ರಕಾರ ನ್ಯಾಯಾಲಯವು ನಿರ್ಭಂದಕಾಜ್ಞೆಯನ್ನು ನೀಡಿದ್ದು ಎಂದು ಸೂಚಿಸಿದರೆ ಸರಿ . ಸದರಿ ನಿರ್ಭಂದಕಾಜ್ಞೆ ಆದೇಶದ ನಂತರ ನಾನು ಪಂಚಾಯತಿಗೆ ದಾವಾ ಆಸ್ತಿಯ ಅಳತೆಗೆ ಅರ್ಜಿ ಸಲ್ಲಿಸಿದ್ದೆ ಎಂದು ಸೂಚಿಸಿದರೆ, ಸಾಕ್ಷಿದಾರರು ನಾನು ಜಿಲ್ಲಾ ಪಂಚಾಯತಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಮೇಲೆ ಪಂಚಾಯತಿಯವರು ದಾವಾ ಆಸ್ತಿಯನ್ನು ಅಳತೆ ಮಾಡಲು ಬಂದರು ಎಂದು ಸೂಚಿಸಿದರೆ ಸರಿ . ನಾನು ಸದರಿ ದಾವಾ ಆಸ್ತಿಯ ಅಳತೆಗೆ ಅರ್ಜಿ ನೀಡುವ ಮೊದಲು ನ್ಯಾಯಾಲಯದಿಂದ ಯಾವುದೇ ಅನುಮತಿ ಪಡೆದಿಲ್ಲ. ನಾನು ನ್ಯಾಯಾಲಯದ ನಿರ್ಭಂದಕಾಜ್ಞೆಯನ್ನು ಧಿಕ್ಕರಿಸಿ ದಾವಾ ಆಸ್ತಿಯ ಅಳತೆಯನ್ನು ಮಾಡಿಸಿದ್ದೇನೆಂದು ಸೂಚಿಸಿದರೆ ಸರಿಯಲ್ಲ. ಪಂಚಾಯತಿಯವರು ಅಳತೆ ಮಾಡಲು ಬಂದಾಗ ನಾನು ಅವರಿಗೆ ನಿರ್ಭಂದಕಾಜ್ಞೆ ಇರುವ ಬಗ್ಗೆ ತಿಳಿಸಿಲ್ಲ. ಪ್ರತಿವಾದಿ ನಂ.2 ಪಂಚಾಯತಿಯವರಿಗೆ ನಿರ್ಭಂದಕಾಜ್ಞೆ ಇರುವ ಬಗ್ಗೆ ತಿಳಿಸಿದರು ಎಂದು ಸೂಚಿಸಿದರೆ, ನನಗೆ ಗೊತ್ತಿಲ್ಲ. ನಾನು ಪಂಚಾಯತಿಯವರಿಗೆ ನಿರ್ಭಂದಕಾಜ್ಞೆ ಬಗ್ಗೆ ಹೇಳಬೇಕು ಎಂಬ ಕರ್ತವ್ಯ ಇದೆ ಎಂದು ನನಗೆ ಗೊತ್ತಿರಲಿಲ್ಲ. ನಾನು ನ್ಯಾಯಾಲಯದ ಆದೇಶವನ್ನು ಅಪಮಾನ ಮಾಡಿ ದಾವಾ ಆಸ್ತಿಯ ಅಳತೆಯನ್ನು ಮಾಡಿಸಿದ್ದೇನೆಂದು ಸೂಚಿಸಿದರೆ, ನನಗೆ ಅಂತಹ ಉದ್ದೇಶವಿಲ್ಲ ಎಂದು ನುಡಿಯುತ್ತಾರೆ. ನಾವು ದಾವಾ ಆಸ್ತಿಯ ಮಾಲಿಕರು ಇಲ್ಲದೇ ಇದ್ದರೂ ಸಹಿತ, ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಪಂಚಾಯತಿಗೆ ಖೊಟ್ಟಿ ಅರ್ಜಿ ಕೊಟ್ಟು ದಾವಾ ಆಸ್ತಿಯನ್ನು ಅಳತೆ ಮಾಡಿಸಿಕೊಂಡಿದ್ದೇನೆಂದು ಸೂಚಿಸಿದರೆ ಸರಿಯಲ್ಲ. ಅಡಿವೆಪ್ಪಾ ಧಾರವಾಡ ಇವರು ಸನ 2000 ದಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಹೋದ ನಂತರ ಪಂಚಾಯತಿಗೆ ದಾವಾ ಆಸ್ತಿಯ ದಾಖಲೆಗಳಲ್ಲಿ

ವಾದಿಯರ ಹೆಸರನ್ನು ದಾಖಲಿಸುವ ಉದ್ದೇಶದಿಂದ ಅರ್ಜಿಗಳನ್ನು ನೀಡಿರುತ್ತೇವೆ, ಆದರೆ ದಾವೆ ಇರುವ ಕಾರಣ ಹೆಸರನ್ನು ನಮೂದು ಮಾಡಿರುವುದಿಲ್ಲ. ಅರ್ಜಿಗಳನ್ನು ನೀಡಿದ್ದೇನೆಂದು ತೋರಿಸಲು ಹಾಗೂ ದಾವೆ ಇರುವ ಕಾರಣ ಹೆಸರನ್ನು ನಮೂದು ಮಾಡಿಲ್ಲವೆಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಮೃತ ಅಡಿವೆಪ್ಪನಿಗಾಗಲೀ ಹಾಗೂ ಆತನ ವಾರಸುದಾರರಿಗಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದೇ ಇರುವ ಕಾರಣ ಇಲ್ಲಿಯವರೆಗೂ ಪಂಚಾಯತಿಗೆ ಅವರ ಹೆಸರನ್ನು ಸೇರಿಸುವಂತೆ ಯಾವುದೇ ಅರ್ಜಿ ನೀಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನಾನು 1972 ರಿಂದ 1979 ರವರೆಗೆ ಗ್ರಾಮ ಪಂಚಾಯತಿಯ ಸದಸ್ಯನಾಗಿದ್ದೆ. ಅದಕ್ಕೂ ಪೂರ್ವದಲ್ಲಿ ಮೃತ ನನ್ನ ಮಾವ ಅಡಿವೆಪ್ಪ ಪಂಚಾಯತಿಯ ಚೇರಮನ ಇದ್ದರು ಎಂದು ಸೂಚಿಸಿದರೆ ಸರಿ . ನನ್ನ ಮಾವ ಚೇರಮನ ಇದ್ದಾಗ ಅದರ ಗೈರುಫಾಯಿದೆ ತೆಗೆದುಕೊಂಡು ಪ್ರತಿವಾದಿಯರ ಆಸ್ತಿಗೆ ಅವರ ಹೆಸರನ್ನು ನಮೂದಿಸಿಕೊಂಡರು ಎಂದು ಸೂಚಿಸಿದರೆ ಸರಿಯಲ್ಲ. ಸದರಿ ಎಂಟ್ರಿಯು ಪೋಕಳ ಎಂಟ್ರಿ ಇರುವುದರಿಂದ ಪಂಚಾಯತಿಯಲ್ಲಿ ಯಾವುದೇ ಠರಾವು ಆಗಿರುವುದಿಲ್ಲ ಹಾಗೂ ಕರ ಆಕರಣಾ ಯಾದಿಗಳು ಇರುವುದಿಲ್ಲವೆಂದು ಸೂಚಿಸಿದರೆ ಸರಿಯಲ್ಲ. ಆಸ್ತಿ ನಂ.188 ಪ್ರತಿವಾದಿಯರಿಗೆ ಸೇರಿದ್ದರೂ ಸಹಿತ, ಹೊಂದಿಕೊಂಡಿರುವ ಖುಲ್ಲಾ ಜಾಗೆಯನ್ನು ಕಬಳಿಸುವ ಉದ್ದೇಶದಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯು ಹಾಗೂ ಖೊಟ್ಟಿ ಖರೀದಿ ಪತ್ರಕ್ಕೆ ಸಂಬಂಧ ಪಟ್ಟ ಆಸ್ತಿ ಬೇರೆ ಬೇರೆಯಾಗಿರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ವಾದಿಯರು ನನಗೆ ಮುಕ್ತಿಯಾರ ಪತ್ರ ನೀಡಿದೇ ಇದ್ದರೂ ಸಹಿತ, ಮುಕ್ತಿಯಾರ ಪತ್ರ ನೀಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.